ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಅಂದಾಜು ಪತ್ರಿಕೆಯನ್ನು ತಯಾರಿಸಿದ್ದು ಪರಿಶೀಲನೆಯಲ್ಲಿರುತ್ತದೆ.

ಆ) ಕಂಗಾನೂರು ಏತ ನೀರಾವರಿ ಯೋಜನೆಯು ಮಲಪ್ರಭಾ ಯೋಜನೆಯ ಬಲದಂಡೆ ಕಾಲುವೆ ಅಂಚಿನ, ನೀರು ವಂಚಿತ 991 ಎಕರೆ ಆಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಕಾಮಗಾರಿಯ ಅಂದಾಜು ವೆಚ್ಚ ರೂ. 192.21 ಲಕ್ಷಗಳು.

ಏಣಗಿ-ಹಿಟ್ಟಣಗಿ ಆಗಮೆಂಟೇಷನ್ ಆಫ್ ಲಿಫ್ಟ್ ಇರಿಗೇಶನ್ ಸ್ಕೀಮ್ ಮಂಜೂರಾತಿ

1669 (1771) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) - ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಯೋಜನೆ ಮುಳುಗಡೆ ಪ್ರದೇಶದ ಜನರ ಅನುಕೂಲತೆಗಾಗಿ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಏಣಗಿ-ಹಿಟ್ಟಣಗಿ ಆಗಮೆಂಟೇಷನ್ ಆಫ್ ಲಿಫ್ಟ್ ಇರಿಗೇಶನ್ ಸ್ಕೀಮ್ ಮಂಜೂರು ಮಾಡುವ ಸಲುವಾಗಿ ಅಂದಾಜು ವೆಚ್ಚ ತಯಾರಿಸಿರುವ ಸಂಗತಿ ನಿಜವೇ;

ಆ) ಈಗ ಆ ಯೋಜನೆ ಯಾವ ಹಂತದಲ್ಲಿದೆ ;

ಇ) ಈ ಯೋಜನೆಯಿಂದಾಗಿ ಎಷ್ಟು ಎಕರೆ ಜಮೀನು ನೀರಾವರಿ ಆಗುವುದು ಹಾಗೂ ಎಷ್ಟು ಹಣ ಖರ್ಚು ಬರುವುದು ?

ಶ್ರೀ ಹೆಚ್.ಕೆ ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಅಂದಾಜು ಪತ್ರಿಕೆಯನ್ನು ರೂ. 95.60 ಲಕ್ಷಗಳಿಗೆ ತಯಾರಿಸಿದ್ದು ಪರಿಶೀಲನೆಯಲ್ಲಿದೆ.

ಆ) ಈ ಯೋಜನೆ ಪರಿಶೀಲನೆಯಲ್ಲಿದೆ.

ಇ) ಈ ಆಗ್‌ಮೆಂಟೇಷನ್ ಯೋಜನೆಯಿಂದ ಏಣಗಿ ಹಿಟ್ಟಣಗಿ ಏತ ನೀರಾವರಿ ಯೋಜನೆಯ ಬಲದಂಡೆ ಕಾಲುವೆ 6ನೇ ಹಂಚಿಕೆಯ ಟೈಲ್ ಎಂಡ್ ಆಚ್ಚುಕಟ್ಟು ಪ್ರದೇಶದ ನೀರು ವಂಚಿತ ಸುಮಾರು 1224 ಎಕರೆ ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ. ಯೋಜನೆಯ ಅಂದಾಜು ವೆಚ್ಚ ರೂ. 95.60 ಲಕ್ಷಗಳಾಗುವುದು.

ರಾಜ್ಯದಲ್ಲಿ ಬಾಟಲಿಯಲ್ಲಿ ನೀರು ಮಾರುತ್ತಿರುವ ಕಂಪನಿಗಳು

1670 (2113) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಶುದ್ಧ ಕುಡಿಯುವ ನೀರನ್ನು (ಮಿನಿರಲ್ ವಾಟರ್) ಬಾಟಲಿ ಮುಖಾಂತರ ಮಾರಾಟ ಮಾಡಲು ಎಷ್ಟು ಕಂಪನಿಗಳು ನೋಂದಾಯಿಸಲ್ಪಟ್ಟಿದೆ ;

ಆ) ಈ ಕಂಪನಿಗಳು ಮಾರಾಟ ಮಾಡುತ್ತಿರುವ ನೀರು ಉತ್ತಮ ಗುಣಮಟ್ಟದಲ್ಲಿ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆವೆ ;

ಇ) ಹಾಗಿದ್ದಲ್ಲಿ, ನೀರು ಶುದ್ಧವಿರುವುದನ್ನು ತಿಳಿಯಲು ಎಷ್ಟು ಕಂಪನಿಗಳ ನೀರನ್ನು ಪರಿಶೀಲನೆ ಮಾಡಲಾಗಿದೆ ; (ವಿವರ ನೀಡುವುದು) ;

ಈ) ಎಷ್ಟು ಕಂಪನಿಗಳು ಐ.ಎಸ್.ಐ ಒಪ್ಪಿಗೆ ಪಡೆದಿವೆ ?